# ಬಿಟ್ಟನೆಂದರೆ ಬಿಡದೀ ನೆರಳು...

ಪ್ರತಿ ಬಾರಿಯೂ ರಿಂಗಾದಾಗ
ನಿನ್ನದೇ ರೂಪ, ನಿನ್ನದೇ ದನಿ
ನೆರಳಾಗಿ ಕಾಡುವೆ
ನನ್ನ ಹಿಂಬಾಲಿಸಿ

ಟಾರ್ ರಸ್ತೆಯ ಮೇಲಿನ
ವಿಷದ ಗಾಳಿಗಿಂತಲೂ,
ನಿನ್ನ ನೆನಪುಗಳೇ ನನಗೆ
ಉಸಿರು ಗಟ್ಟಿಸುತ್ತಿವೆ.
ಎದುರಾಗಬಾರದೇ ಒಮ್ಮೆ

ಹುಚ್ಚು ಮನಸಿನ ಗಟ್ಟಿಗಿತ್ತಿ ನಾನು
ನೀ ನಡೆದು ಹೋದ ದಾರಿಯಲಿ
ಅಂಟಿದ ನೆರಳ ನಂಟಿನೊಂದಿಗೆ
ನೀ ಹೇಳದಿದ್ದರೂ ಚಲಿಸಿರುವೆ

ಸೈಕಲ್ ಚಕ್ರ ಸವೆದರೂ
ತುಳಿದ ಕಾಲು ಸೋಲುತ್ತಿಲ್ಲ
ನಿನ್ನ ಸೇರುವ ತವಕದಲಿ
ಸಾಗಿದ ದೂರ ಲೆಕ್ಕವಿಲ್ಲ

ಗೆಳೆಯನೆ ನೀನಿರುವುದು
ಭೂಮಿಯ ಮೇಲಲ್ಲವೆ
ನನ್ನ ನೆರಳಿನ ಜೊತೆಗೆ ನಿನ್ನ ನೆರಳಾಗಲು
ಎಷ್ಟು ಕಾಲವಾದರೂ ಬಂದು ನಿನ್ನ ಸೇರುವೆ.

● **ಶ್ರೀಧರ ಎಸ್. ಹಳ್ಳೂರ**



# ಸವಾರಿ

ಸೂರ್ಯನಿಗೆ ಎದುರಾಗಿ
ನೆರಳಿಗೆ ಮರೆಯಾಗಿ
ಕನಸುಗಳ ಬೆನ್ನೇರಿ
ಹೊರಟೇ ಬಿಟ್ಟಳು
ಜಾಲಿ ಸವಾರಿ.

ಜಗತ್ತನ್ನು ಅಂಗೈಯಲ್ಲಿ ಹಿಡಿದು
ಸಾಗುವ ದಾರಿಯ, ಮುಟ್ಟುವ ಗುರಿಯ
ಪಾದದಿ ತುಳಿದು
ಹೊರಟೇ ಬಿಟ್ಟಳು
ಗಾಳಿಯಲಿ ಸವಾರಿ.

ಆಕಾಶದಾಚೆ ಹೋಗುವಾಸೆ
ಮುಗಿಲನು ಏರುವಾಸೆ
ಅಂಜಿಕೆ ಬಳಿಯೂ ಸುಳಿಯದು
ಅಳುಕು ಮೊದಲೇ ಇಲ್ಲ
ಹಿಂಬಾಲಿಸಿಹುದು ಅವಳ ಛಾಯೆ.

ಯಾರನೂ ಕೇಳದೆ ಹೊರಟಳು ಸವಾರಿ
ಜಗವನು ಅರಿಯುತ ಈ ಪೋರಿ.

● **ಹ.ನಾ. ಕುಮಾರ್**